ಓಎಸ್ 80/2023 ಪಿ ಡಬ್ಲ್ಯೂ 1 ಚಿಕ್ಕತಾಯಮ್ಮ

ದಿನಾಂಕ 10.07.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀಸವಾಲುಃ</u> ಪ್ರತಿವಾದಿ ಪರ ಶ್ರೀ.ಎನ್.ಕೆ.ಎಸ್. ವಕೀಲರಿಂದಃ

ನನ್ನ ತಂದೆ ಕೊಬ್ರಯ್ಯ ಮತ್ತು ಪ್ರತಿವಾದಿಯ ತಂದೆ ಮಂಚಯ್ಯರವರು ಅಣ್ಣ-ತಮ್ಮಂದಿರುತ್ತಾರೆ. ಸದರಿ ಪ್ರತಿವಾದಿಯು ನನ್ನ ಅಕ್ಕನ ಅಳಿಯ ಇರುತ್ತಾರೆ. ನನ್ನ ತಂದೆ, ನನ್ನ ಚಿಕ್ಕಪ್ಪಂದಿರು, ಚಿಕ್ಕಪ್ಪನ ಹೆಂಡತಿ ಮಂಚಮ್ಮರವರು ಎಲ್ಲರೂ ಅನ್ಯೋನ್ಯವಾಗಿದ್ದರು. ಈ ದಾವೆ ಸಲ್ಲಿಸುವವರೆಗೆ ನಾವೆಲ್ಲರೂ ಅನ್ಯೋನ್ಯವಾಗಿದ್ದೇವು ಎಂದರೆ ಸುಳ್ಳು. ಸಾಕ್ಷಿಯು ಸ್ವತಃ ನುಡಿಯುವುದೇನೆಂದರೆ 4-5 ವರ್ಷಗಳಿಂದ ಗಲಾಟೆ ಆಗುತ್ತಿದ್ದವು ಎಂದು ನುಡಿಯುತ್ತಾರೆ. ನನ್ನ ಗಂಡನ ಹೆಸರು ಶಿವಕುಮಾರ ಎಂದು ಇದ್ದು, ಅವರು ಬದುಕಿರುತ್ತಾರೆ. ನಾನು ನನ್ನ ಪ್ರಮಾಣ ಪತ್ರದಲ್ಲಿ, ನಾನು ವಿಧವೆ ಆಗಿದ್ದು, ಇಬ್ಬರು ಅಲ್ಪವಹಿ ಮಕ್ಕಳೊಂದಿಗೆ ಜೀವನ ಸಾಗಿಸುತ್ತಿದ್ದೇನೆ ಎಂದು ಬರೆಸಿದ್ದು, ಪ್ರಮಾಣ ಪತ್ರದಲ್ಲಿ ತಪ್ಪಾಗಿರಬಹುದು ಎಂದು ನುಡಿಯುತ್ತಾರೆ. ನಾನು ನನ್ನ ಗಂಡ ವಿರುದ್ದ ಜೀವನಾಂಶಕ್ಕಾಗಿ ಸಲ್ಲಿಸಿದ ಕೇಸ್ ನಲ್ಲಿ ನಾನು ಪ್ರತಿವಾದಿ ಹಾಗೂ ನನ್ನ ತಂದೆ ಕೊಬ್ರಯ್ಯರವರು ಜೊತೆಗೆ ಬರುತ್ತಿದ್ದರು. ಸಾಕ್ಷಿಯು ನಾನು ನನ್ನ ತಂದೆಯ ಜೊತೆಗೆ ಬರುತ್ತಿದ್ದೆ ಎಂದು ನುಡಿಯುತ್ತಾರೆ. ನಾನು ಮತ್ತು ಪ್ರತಿವಾದಿ ಹಾಗೂ ಅವರ ಕುಟುಂಬದವರು ಎಲ್ಲರೂ ಚೆನ್ನಾಗಿದ್ದೇವು, ಈ ಕೇಸು ಹಾಕುವವರಿಗೆ ಎಲ್ಲರೂ ಚೆನ್ನಾಗಿದ್ದೇವು ಎಂದರೆ ಸುಳ್ಳು. ಯಾವ ವರ್ಷ ಮನೆ ಕಟ್ಟಿರುತ್ತೇನೆ ನನಗೆ ಗೊತ್ತಿಲ್ಲ. ಆದರೆ ಮನೆ ಕಟ್ಟಿ 16 ವರ್ಷಗಳಾಗಿವೆ. ನಾನು ಕಟ್ಟಿಸಿದ ಮನೆ ವಿಸ್ತೀರ್ಣ ಗೊತ್ತಿಲ್ಲ, ಆದರೆ 3 ರೂಮ್, 1 ಅಡುಗೆ ಮನೆ, ಸ್ನಾನದ ಮನೆಗಳಿರುತ್ತವೆ. ಸದರಿ ಮನೆಯು ಎಷ್ಟು ಅಡಿ ಉದ್ದ ಮತ್ತು ಅಗಲದಲ್ಲಿ ಕಟ್ಟಲಾಗಿದೆ ಎಂದು ನನಗೆ ಹೇಳಲಾಗುವುದಿಲ್ಲ. ಸದರಿ ಮನೆಯನ್ನು ವ್ಯವಸಾಯದ ದವಸ-ಧಾನ್ಯಗಳನ್ನು ಇಡಲು ಮಾಡಿಕೊಂಡಿರುತ್ತೇವೆ. ಸದರಿ ಮನೆಯನ್ನು ಕಟ್ಟಲು ಲೈಸೆನ್ಸ್ ಪಡೆದಿಲ್ಲ ಮತ್ತು ಯಾರಿಗೂ ಸಹ ಕಾಂಟ್ರ್ಯಾಕ್ಟ್ ಕೊಟ್ಟಿರಲಿಲ್ಲ. ಮನೆ ಕಟ್ಟುವಾಗ ಖರೀದಿಸಿದ ಕಲ್ಲು, ಇಟ್ಟಿಗೆ ಮತ್ತು ಸಿಮೆಂಟ್ ಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ಮನೆಯನ್ನು ನನ್ನ ಸೋದರ ಮಾವ ಕಟ್ಟಿಸಿ ಕೊಟ್ಟಿರುತ್ತಾರೆ.

2. ನಾನು ಮನೆ ಕಟ್ಟಿದ 10 ವರ್ಷಗಳಿಂದ ತಾನು ಮನೆ ಕಟ್ಟುವವರೆಗೆ ಸದರಿ ಮನೆಯಲ್ಲಿ ವಾಸವಾಗಿರುತ್ತೇನೆಂದು ಕೋಳಿಕೊಂಡಿದ್ದರಿಂದ ಪ್ರತಿವಾದಿಗೆ ಕೊಟ್ಟಿದ್ದೆ. ಸದರಿ ಮನೆಯನ್ನು ಪ್ರತಿವಾದಿಗೆ ವಾಸ ಮಾಡಲು ಕೊಟ್ಟಾಗ ನನ್ನ ತಂದೆ ಮತ್ತು ತಾಯಿ ಇದ್ದರು. ಪ್ರತಿವಾದಿಯ ಮನೆಯವರು ಬೇರೆ ಯಾರು ಇರಲಿಲ್ಲ. ಆ ಬಗ್ಗೆ ಯಾವುದೇ ಬರವಣಿಗೆ ಆಗಿರುವುದಿಲ್ಲ. ಪ್ರತಿವಾದಿ ರವಿಕುಮಾರ್ ರವರು ನನ್ನಿಂದ ಮನೆಯಲ್ಲಿ ವಾಸ ಮಾಡುತ್ತೇನೆಂದು ಮನೆಯನ್ನು ಪಡೆದಾಗ ಪ್ರತಿವಾದಿ ಮತ್ತು ಆತನ ಹೆಂಡತಿ ಮಕ್ಕಳು ಮಾತ್ರ ಇದ್ದರು, ಬೇರೆ ಯಾರು ಇರಲಿಲ್ಲ. ನನಗೆ ತಿಳಿದಿರುವಂತೆಯೇ ಪ್ರತಿವಾದಿಯ ತಂದೆ ಮಂಚಯ್ಯ ಮತ್ತು ಅವರ ಹೆಂಡತಿ ಮಂಚಮ್ಮರವರುಗಳು ಸಹ ಪ್ರತಿವಾದಿಯೊಂದಿಗೆ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸುಳ್ಳು. ನಾನು ಮನೆ ಕಟ್ಟಿದ ನಂತರವೂ ಸಹ ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸಿ, ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ಮಾಡಿಕೊಡಿ ಎಂದು ಕೇಳಿಲ್ಲ. ನಾನು ಮನೆ ಕಟ್ಟಿದಾಗಿನಿಂದ 2021 ರವರೆಗೆ ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸಿ, ನಲ್ಲಿ ಕನೇಕ್ಷನ್ ಕೊಡಿ ಎಂದು ಮತ್ತು ಚಾಮುಂಡೇಶ್ವರಿ ವಿದ್ಯುತ್ ಸರಬರಾಜುಗೆ ಅರ್ಜಿ ಸಲ್ಲಿಸಿ, ವಿದ್ಯುತ್ ಕೊಡಿ ಎಂದು ಕೇಳಿಲ್ಲ. ನಾನು ಪ್ರತಿವಾದಿಗೆ ನಮ್ಮ ವಕೀಲರ ಮುಖಾಂತರ ಬಾಡಿಗೆ ಕೊಡುತ್ತಿಲ್ಲ ಮತ್ತು ಮನೆಯನ್ನು ಖಾಲಿ ಮಾಡುತ್ತಿಲ್ಲ ಎಂದು ಆತನಿಗೆ ಮನೆಯನ್ನು ವಾಸಕ್ಕೆ ನೀಡಿದಾಗಿನಿಂದಲೂ ನೋಟೀಸ್ ಕೊಟ್ಟಿಲ್ಲ. ನಾನು ಪ್ರತಿವಾದಿಗೆ ವಿದ್ಯುತ್ ಸಂಪರ್ಕ ಪಡದುಕೊಳ್ಳಲು, ಖಾತೆ ಮಾಡಿಸಿಕೊಳ್ಳಲು, ನೀರಿನ ಸಂಪರ್ಕ ಕಲ್ಪಿಸಿಕೊಳ್ಳಲು ಕೇಳಿದಾಗಲೆಲ್ಲ ಹಣ ನೀಡಿರುತ್ತೇನೆ ಎಂದು ಪ್ರಮಾಣ ಪತ್ರದಲ್ಲಿ ತಿಳಿಸಿದ್ದು, ಯಾವ ಯಾವ ವರ್ಷ, ಯಾವ ಯಾವ ದಿನಾಂಕಗಳಂದು ಎಷ್ಟು ಹಣ ನೀಡಿರುತ್ತೇನೆಂದು ಹೇಳಲಾಗುವುದಿಲ್ಲ. ಸಾಕ್ಷಿಯು ಈಗ್ಗೆ 5-6 ವರ್ಷಗಳ ಹಿಂದೆ ಹಣ ನೀಡಿರುತ್ತೇನೆಂದು ನುಡಿಯುತ್ತಾರೆ. ನಾನು ನನ್ನ ಪ್ರಮಾಣ ಪತ್ರದಲ್ಲಿ ಇನ್ನೂ 16 ಸಾವಿರ ಹಣ ಕೊಡುವುದು ಇದೆ ಎಂದು ಹೇಳಿರುವುದಿಲ್ಲ. ನಿಪಿ.29 ರಲ್ಲಿ ನಾನು ಪ್ರತಿವಾದಿ ರವಿಕುಮಾರ್ ಗೆ ಇನ್ನೂ 16 ಸಾವಿರ ಹಣ ಕೇಳಿದರೂ, ಆಗ ನಾನು ಹಣವನ್ನು ಹೊಂದಿಸಲು ಕಾಲಾವಕಾಶ ಕೇಳಿದೆ ಎಂದು ನಾನು ಅರ್ಜಿಯಲ್ಲಿ ತಿಳಿಸಿಲ್ಲ. ನಾನು ಪ್ರತಿವಾದಿಗೆ ಮನೆ ಬಿಟ್ಟು ಕೊಡಿ ಎಂದು ಪಂಚಾಯಿತಿ ಕೇಳಿಲ್ಲ, ಆದರೆ ನಾನೇ ಹೋಗಿ ಕೇಳಿರುತ್ತೇನೆ. ಯಾವ ಯಾವ ವರ್ಷ, ತಿಂಗಳು, ದಿನಾಂಕಗಳಂದು ಪ್ರತಿವಾದಿಗೆ ಮನೆ ಬಿಟ್ಟು ಕೊಡಿ ಎಂದು ಹೇಳಲಾಗುವುದಿಲ್ಲ.

ಪ್ರತಿವಾದಿಯ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ